ಒ.ಎಸ್. ನಂ.165/2014
ಪಿಡಬ್ಲು-1

ದಿನಾಂಕ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದ**

ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳನ್ನು ವಕೀಲರು ನನಗೆ ಗೊತ್ತಿರುವ ಭಾಷೆಯಲ್ಲಿ ಓದಿ ಹೇಳಿರುತ್ತಾರೆ.

ನಿಪಿ-18 ನ್ನು ಪಿಡಿಓ ರವರು ತಯಾರು ಮಾಡಿರುತ್ತಾರೆ. ನಿಪಿ-18 ನ್ನು ತಯಾರಿಸಲು ಪಿಡಿಓ ಕೆಲ್ಲೂರರವರು ನನಗಾಲಿ, ಪ್ರತಿವಾದಿಯರಿಗಾಗಲಿ ಮತ್ತು ಅಕ್ಕಪಕ್ಕದ ಮನೆಯ ಮಾಲಿಕರಿಗೆ ನೋಟಿಸು ನೀಡಿಲ್ಲ. ನಿಪಿ-18 ನ್ನು ಯಾವ ದಿನಾಂಕ, ತಾರೀಖಿನಿಂದ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-18 ನ್ನು ತಯಾರಿಸುವ ಮೊದಲು ಪಿಡಿಓ ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-18 ನ್ನು ಎಷ್ಟು ವರ್ಷಗಳ ಹಿಂದೆ ಮಾಡಿರುತ್ತಾರೆ ಎಂದರೆ ಸಾಕ್ಷಿ 1-ವರ್ಷದ ಹಿಂದೆ ತಯಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-18 ನ್ನು ತಯಾರಿಸಿದಾಗ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಪೀಲ ಚಾಲ್ತಿಯಲ್ಲಿತ್ತು ಎಂದರೆ ನಿಜ. ಸದರಿ ನಿಪಿ-18 ನ್ನು ಯಾವ ಆಧಾರದ ಮೇಲೆ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಜಾಗದ ಪ್ರಕಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-18 ರ ಮೇಲೆ ಪಂಚಾಯತಿಯ ರೌಂಡ್ ಶೀಲ್ ಇರುವುದಿಲ್ಲ ಎಂದರೆ ನಿಜ. ನಿಪಿ-18 ರಲ್ಲಿ ಬರೆದಿರುವ ಚೆಕಬಂದಿ ನನಗೆ ಗೊತ್ತಿಲ್ಲ. ನಿಪಿ-18 ತಪ್ಪಾಗಿದೆಯೋ ಅಥವಾ ಸರಿಯಾಗಿದೆಯೋ ಎಂದು ನಾನು ಓದಿಸಿ ತಿಳಿದುಕೊಂಡಿರುತ್ತೇನೆ.

ನಿಪಿ-11 ರ ಚೆಕಬಂದಿಯಲ್ಲಿ ಉತ್ತರಕ್ಕೆ ಮಲಕಪ್ಪ ಪೂಜಾರಿರವರ ಬಯಲು ಜಾಗ ಎಂದು ನಮೂದಾಗಿರುತ್ತದೆ ಎಂದರೆ ನಿಜ. ನಿಪಿ-18 ರಲ್ಲಿ ಉತ್ತರಕ್ಕೆ ಮಲಕಪ್ಪ ಪೂಜಾರಿರವರ ಬಯಲು ಜಾಗ ಎಂದು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ-11 ಮತ್ತು 18 ರ ನಕಾಶೆಗಳಲ್ಲಿ ಕಟ್ಟಡದ ವಿನ್ಯಾಸಗಳು ವ್ಯತ್ಯಾಸಗಳಿರುತ್ತವೆ ಎಂದರೆ ನಿಜ. ನಿಪಿ-18 ರಲ್ಲಿ ಎಷ್ಟು ಅಳತೆಯ ಕೋಣೆಗಳಿವೆ ಎಂದು ನಮೂದಿಸಿಲ್ಲ ಎಂದರೆ ಸರಿ. ನಿಪಿ-17 ರಲ್ಲಿ ಕಾಣುವ ಪಾನ ಶಾಪ್ ಅಂಗಡಿ ಇತ್ತು ಆದರೆ ನಿಪಿ-18 ರಲ್ಲಿ ತೋರಿಸಿಲ್ಲ ಎಂದರೆ ಸರಿ. ಸದರಿ ಪಾನಶಾಪ ಅಂಗಡಿ ನಿಪಿ-18 ರಲ್ಲಿ ತೋರಿಸಲು ಯಾವುದಾದರೂ ತೊಂದರೆ ಇತ್ತಾ ಎಂದರೆ

ಸಾಕ್ಷಿ ತೋರಿಸಿಲ್ಲ ಎಂದು ನುಡಿಯುತ್ತಾರೆ.

ನನ್ನ ಮಗ ನಿಂಗಪ್ಪನು ಮರಣ ಹೊಂದಿರುತ್ತಾನೆ. ಆದರೆ ಅವನಿಗೆ ಮದುವೆಯಾಗಿರುತ್ತದೆ. ನಿಂಗಪ್ಪನ ವಾರಸುದಾರ ಆತನ ಹೆಂಡತಿಯಾದ ಅನ್ನಪೂರ್ಣ ಎಂದರೆ ಸರಿ. ಸದರಿ ಅನ್ನಪೂರ್ಣರವರು ನನಗೆ ಹಕ್ಕು ಪತ್ರ ಬಿಡುಗಡೆ ಪತ್ರ ಮಾಡಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಿಂಗಪ್ಪನ ವಾರಸುದಾರ ಅನ್ನೂಪರ್ಣ ಇದ್ದು ಆಕೆಯ ಪರವಾಗಿ ನನಗೆ ಈ ದಾವೆ ನಡೆಸಲು ಯಾವುದೆ ಅಧಿಕಾರಿ ಇಲ್ಲ ಎಂದರೆ ಸಾಕ್ಷಿ ಸದರಿ ಅನ್ನಪೂರ್ಣ ಇನ್ನೊಂದು ಮದುವೆಯಾಗಿರುತ್ತಾಳೆ ಎಂದು ನುಡಿಯುತ್ತಾರೆ.

ನಿಪಿ-18 ನ್ನು ತಯಾರಿಸಲು ನಾನು ಅರ್ಜಿ ಸಲ್ಲಿಸಿಲ್ಲ ಆದರೆ ಬಾಯಿ ಮಾತಿನಿಂದ ಹೇಳಿರುತ್ತೇನೆ. ಸದರಿ ನಿಪಿ-18 ನ್ನು ನನ್ನ ಹೇಳಿಕೆ ಮೇರೆಗೆ ತಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ಜಾಗದ ಪ್ರಕಾರ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಪಿಡಿಓ ರವರನ್ನು ಕೇಳಿ ಎಂದು ನುಡಿಯುತ್ತಾರೆ. ನಿಪಿ-18 ನ್ನು ನಿಖರವಾಗಿ ಯಾರು ತಯಾರು ಮಾಡಿರುತ್ತಾರೆಂದು ನನಗೆ ಹೇಳಲು ಬರುವುದಿಲ್ಲ. ನಿಪಿ-18 ರಂತಹ ಪ್ರತಿ ಪಂಚಾಯತಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಿಪಿ-18 ರ ನಕಲನ್ನು ಪಡೆಯಬೇಕಾದರೆ ಪಂಚಾಯತಿಯವರು ಅರ್ಜಿ ಪಡೆದುಕೊಂಡು ಅವರ ಹೆಸರು ನಮೂದಿಸಿ ನಿಪಿ-18 ನ್ನು ನೀಡುತ್ತಾರೆ ಎಂದರೆ ಸಾಕ್ಷಿ ನನ್ನ ಕಾಗದ ಪತ್ರಗಳು ಪಂಚಾಯತಿಯಲ್ಲಿ ಇರುತ್ತವೆ ಎಂದು ನುಡಿಯುತ್ತಾರೆ. ನಾನು ನಿಪಿ-18 ನ್ನು ಪಡೆಯಲು ಯಾವುದೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸಾಕ್ಷಿ ಬಾಯಿ ಮಾತಿನಿಂದ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

ಈ ದಾವೆಯನ್ನು ಪಾನ ಡಬ್ಬಿ ಸಲುವಾಗಿ ಹೂಡಿರುತ್ತೇನೆ. ಪ್ರತಿವಾದಿಯರು ಪಾನ ಡಬ್ಬಿಯನ್ನಉ ನನ್ನ ಜಾಗದಲ್ಲಿ 4 ಪೂಟು ಜಾಗ ನನ್ನ ಸ್ವತ್ತಿನಲ್ಲಿ ಉಳಿದ ಜಾಗ ರಸ್ತೆಯ ಮೇಲೆ ಇಟ್ಟ ಬಗ್ಗೆ ದಾವೆ ಸಲ್ಲಿಸಿರುತ್ತೇನೆ. ಸದರಿ ಡಬ್ಬಿಯನ್ನು ತೆಗೆಯುವ ಸಲುವಾಗಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ದಾವಾ ಸ್ವತ್ತಿನ ಉತ್ತರಕ್ಕೂ ಹಾಗೂ ದಕ್ಷಿಣಕ್ಕೂ ರಸ್ತೆಗಳಿವೆ ಎಂದರೆ ಸರಿ. ನಾನು ಎರಡೂ ರಸ್ತೆಗಳನ್ನು ಉಪಯೋಗಿಸುತ್ತೇನೆ ಎಂದರೆ ಸರಿ. ನಾನಾಗಲಿ, ನನ್ನ ಮಕ್ಕಳಗಾಲಿ ಎರಡೂ ರಸ್ತಗಳಲ್ಲಿ ಹೋಗಿ ಬರಲಿಕ್ಕೆ ಅನುಕೂಲ ಇದೆ ಎಂದರೆ ಸರಿ.

ನಾಗಪ್ಪ, ಯಂಕಪ್ಪ ಹಾಗೂ ಯಲ್ಲಪ್ಪನ ಹೆಸರಿನಲ್ಲಿ ಪಂಚಾಯತಿಲ್ಲ ಯಾವುದೆ

ದಾಖಲೆಗಳನ್ನು ನಾನು ನೋಡಿಲ್ಲ. ಪ್ರತಿವಾದಿಯರು ಪ್ರತಿವಾದ ಪತ್ರ ಸಲ್ಲಿಸಿ ಏನು ಬರೆದು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ವಾದಿ ಪರ ವಕೀಲರ ವಕೀಲರ ಕೋರಿಕೆ ಮೇರೆಗೆ ಮುಂದುವರೆದ ವಾಟಿ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಸಿವಿಲ್ ನ್ಯಾಯಾಧೀಶರು
ಜೇವರ್ಗಿ